


सरयू

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

ಸಂಪುಟ–2 ಸಂಚಿಕೆ 4 5114 ಜ್ಯೇಷ್ಠ/ಜೂನ್ 2012 ಪುಟಗಳು : 8


## ವಿವೇಕಾನಂದ ಶಿಲಾಸ್ಮಾರಕದಲ್ಲಿ...

ವಿಶ್ವವಿಜೇತ ಸ್ವಾಮಿ ವಿವೇಕಾನಂದರ 150ನೇ ಜನ್ಮವರ್ಷಾಚರಣೆ (ಸಾರ್ಧಶತಿ) ಯನ್ನು ಹಿನ್ನೆಲೆಯಾಗಿಟ್ಟುಕೊಂಡು ಶ್ರೀರಾಮ ವಿದ್ಯಾಕೇಂದ್ರ ಹತ್ತು ಹಲವು ಕಾರ್ಯಕ್ರಮಗಳನ್ನು ಆಯೋಜಿಸಿದೆ. ಇವೆಲ್ಲಕ್ಕೂ ಮುನ್ನುಡಿ ಎಂಬಂತೆ ಸಮಗ್ರ ವಿದ್ಯಾಕೇಂದ್ರದ ಕೌಟುಂಬಿಕ ಪ್ರವಾಸವನ್ನು 2012ರ ಮೇ 21 ರಿಂದ 24ರವರೆಗೆ ಕನ್ಯಾಕುಮಾರಿ, ಕೊಲ್ಲಂ ಹಾಗೂ ತಿರುವನಂತಪುರಕ್ಕೆ ಹಮ್ಮಿಕೊಳ್ಳಲಾಗಿತ್ತು.

(ಮುಂದಿನ ಪುಟಕ್ಕೆ)





ಸಂಪಾದಕರು ಹಾಗೂ ಪ್ರಕಾಶಕರು :

ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ (ರಿ.) ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, ದ.ಕ. 574 222. ದೂ. : 08255-275183

Email: info@srvk.org website: www.srvk.org Fax: 08255-275183

ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿಯ ಅಧ್ಯಕ್ಷರು, ಸಂಚಾಲಕರು, ಸದಸ್ಯರು, ವಿದ್ಯಾಸಂಸ್ಥೆಯ ಎಲ್ಲಾ ವಿಭಾಗಗಳ ಶಿಕ್ಷಕ–ಶಿಕ್ಷಕಿಯರು, ಬೋಧಕೇತರ ಸಿಬ್ಬಂದಿಯವರು ಹಾಗೂ ಅಭಿವೃದ್ಧಿ ಸಮಿತಿಗಳ ಮತ್ತು ವ್ಯವಸ್ಥಾಪನಾ ಸಮಿತಿಗಳ ಸದಸ್ಯರು ತಮ್ಮ ಕುಟುಂಬ ವರ್ಗದವರೊಂದಿಗೆ ಒಟ್ಟಾಗಿ ಕಲೆತು–ಬೆರೆತ ಕ್ಷಣಗಳು ಎಲ್ಲರ ಪಾಲಿಗೆ ಅವಿಸ್ಮರಣೀಯವಾಗಿತ್ತು.


ಮೇ 21ರ ಸಾಯಂಕಾಲ ಮಂಗಳೂರಿನಿಂದ ರೈಲಿನಲ್ಲಿ ಹೊರಟ 214 ಜನರ ತಂಡ 22ರ ಮುಂಜಾನೆ ಕೊಲ್ಲಂಗೆ ತಲುಪಿತ್ತು. ವಿಶ್ವದ ಅನೇಕ ರಾಷ್ಟ್ರಗಳಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದ ಮಾತಾ ಅಮೃತಾನಂದಮಯಿಯವರ ಆಶ್ರಮ ಪ್ರದೇಶವಾದ **ಅಮೃತಪುರಿ**ಯಲ್ಲಿ ಬೆಳಗಿನ ಸ್ನಾನ ಹಾಗೂ ಉಪಾಹಾರ. ಬಳಿಕ ಆಶ್ರಮ ಪರಿಸರದ ವೀಕ್ಷಣೆ. ಒಂದೆಡೆ ಸಿಂಧೂ ಸಾಗರದ ಕಡಲತಡಿ, ಇನ್ನೊಂದೆಡೆ ಹಸಿರು ನೀಲಿಯ ಹಿನ್ನೀರ ಕಾಲುವೆಯ ಮಧ್ಯದ ದ್ವೀಪದಂತಹ ತೆಂಗಿನ ಮರಗಳ ತೋಪಿನ ನಡುವೆ ಇರುವ ಅಮೃತಪುರಿ. ಇದು ಸಹಸ್ರಾರು ಆಸ್ತಿಕರ ಪಾಲಿನ ಪುಣ್ಯಭೂಮಿ. ಇಲ್ಲಿನ ವಿವಿಧ ಸೇವಾಪ್ರಕಲ್ಪಗಳು, ದರ್ಶನಪ್ರಾಂಗಣ, ದೇವಾಲಯ ಹಾಗೂ ವಿವಿಧ ಭವನಗಳು ಮುದ ನೀಡಿತು. ಮಧ್ಯಾಹ್ನ ಭೋಜನಾ ನಂತರ ಕನ್ಯಾಕುಮಾರಿಯೆಡೆಗೆ ಪಯಣ. ರಾತ್ರಿಯ ಭೋಜನ–ವಿಶ್ರಾಂತಿಗೆ ವಿವೇಕಪುರಂನಲ್ಲಿ ವ್ಯವಸ್ಥೆ ಕಲ್ಪಿಸಲಾಗಿತ್ತು. ರಾತ್ರಿಯ ಭೋಜನದ ಬಳಿಕ ಎಲ್ಲರೂ ಒಂದೆಡೆ ಸೇರಿ ಪರಸ್ಪರ ಪರಿಚಯ ಹಾಗೂ ಕನ್ಯಾಕುಮಾರಿಯ ವಿವೇಕಾನಂದ ಶಿಲಾಸ್ಮಾರಕ ನಿರ್ಮಾಣದ ಹೋರಾಟದ ವಿವಿಧ ಮಜಲುಗಳನ್ನು ಸಂಸ್ಥೆಯ ಸಂಚಾಲಕರು ಹಾಗೂ ಪುತ್ತೂರು ಜಿಲ್ಲಾ ಸಹಬೌದ್ಧಿಕ್ ಪ್ರಮುಖ್ ಶ್ರೀ ಸುರೇಶ್ ಪರ್ಕಳ ತಿಳಿಸಿಕೊಟ್ಟರು.

ಮೂರು ಸಾಗರಗಳ ಸಂಗಮ ಕ್ಷೇತ್ರವಾದ ಕನ್ಯಾಕುಮಾರಿಯಲ್ಲಿ ಸೂರ್ಯೋದಯ ವೀಕ್ಷಣೆ ಎಲ್ಲರಿಗೂ ಹೊಸ ಅನುಭವ ನೀಡಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಅಖಿಲ ಭಾರತ ಅಧಿಕಾರಿಗಳಾಗಿದ್ದ ಸ್ವರ್ಗೀಯ ಏಕನಾಥ ರಾನಡೆಯವರ ಅನೇಕ ವರ್ಷಗಳ ಸತತ ಪರಿಶ್ರಮದ ಫಲವಾಗಿ, ಸಂಕಲ್ಪ ಶಕ್ತಿಯ ಪ್ರತೀಕವಾಗಿ, ಸಾಗರ ಮಧ್ಯೆ ಶೋಭಿಸುತ್ತಿದ್ದ ವಿವೇಕಾನಂದ ಸ್ಮಾರಕ ಎಲ್ಲರ ಪಾಲಿಗೆ ಅವಿಸ್ಮರಣೀಯ ಆನಂದ ನೀಡಿತು.

1892ರ ಡಿಸೆಂಬರ್, 24, 25, 26ರಲ್ಲಿ ತುಂಬಿ ಮೊರೆವ ಸಾಗರವನ್ನು ಈಜಿ, ಧ್ಯಾನಸ್ಥರಾಗಿ ಕುಳಿತು, ದಿವ್ಯಾನುಭವ ಪಡೆದು ದೇಶವ್ಯಾಪಿ ಸಂಚರಿಸಿ ಸಂಚಲನ ಮೂಡಿಸಿದ ವೀರಸಂನ್ಯಾಸಿ ಸ್ವಾಮಿ ವಿವೇಕಾನಂದರ ಭವ್ಯ ಧೀರೋದಾತ್ತ ಪ್ರತಿಮೆಯೆದುರು ತಾವು ರಾಷ್ಟ್ರಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ಸಂಕಲ್ಪವನ್ನು ತೊಟ್ಟವರು ಎಲ್ಲರು.

ಭಾರತಮಾತೆಯ ಚರಣ ಕಮಲಗಳೆಂದೇ ಕರೆಯಲ್ಪಡುವ ಕನ್ಯಾಕುಮಾರಿಯಿಂದ ಹೊರಟು ಕೇರಳದ ರಾಜಧಾನಿ ತಿರುವನಂತಪುರಕ್ಕೆ ತಲುಪಿದಾಗ ಸಂಜೆಯ ದರ್ಶನಕ್ಕಾಗಿ ಅನಂತಪದ್ಮನಾಭ ಸ್ವಾಮಿ ದೇವಾಲಯದ ಬಾಗಿಲು ತೆರೆದುಕೊಂಡಿತ್ತು. ಪ್ರಪಂಚದ ಅತಿ ಶ್ರೀಮಂತ ದೇವಳಗಳ ಪೈಕಿ ಮೊದಲನೆಯದಾದ ಶಯನಾವಸ್ಥೆಯಲ್ಲಿರುವ ಅನಂತಪದ್ಮನಾಭ ಸ್ವಾಮಿಯನ್ನು ಮೂರು ಬಾಗಿಲುಗಳಿಂದ ನೋಡುವುದೇ ಆನಂದ. ದೇವಾಲಯದೊಳಗೆ ಅತ್ಯಂತ ಕಟ್ಟುನಿಟ್ಟಿನ ವಸ್ತ್ರಸಂಹಿತೆ ನಿಜಕ್ಕೂ ಮೆಚ್ಚುವಂತಹ ಸಂಗತಿ. ಅಲ್ಲಿಂದ ಹೊರಟು ರೈಲಿನ ಮುಖಾಂತರ ವಾಪಸ್ ಮಂಗಳೂರು ತಲುಪಿದ್ದು 24 ರ ಬೆಳಗ್ಗೆ 9–00ಕ್ಕೆ.

ಸಂಸ್ಥೆಯ ಸಂಚಾಲಕರಾದ ಡಾ। ಪ್ರಭಾಕರ ಭಟ್, ಅಧ್ಯಕ್ಷ ಶ್ರೀ ನಾರಾಯಣ ಸೋಮಯಾಜಿ ಇವರುಗಳು ತಮ್ಮೆಲ್ಲಾ ಕುಟುಂಬ ವರ್ಗದೊಂದಿಗೆ ಭಾಗವಹಿಸಿದ್ದು ಎಲ್ಲರಿಗೂ ನವಚೈತನ್ಯ–ಹುರುಪು ನೀಡಿತ್ತು. ಮುಂದಿನ ದಿನಗಳಲ್ಲಿ ವಿವೇಕಾನಂದರ ಸಾರ್ಧಶತಿಯನ್ನು ಆಚರಿಸಲು ಬೇಕಾದ ಶಕ್ತಿ, ಪ್ರೇರಣೆಯನ್ನು ಈ ಪ್ರವಾಸ ಒದಗಿಸಿದೆ. ಶ್ರೀರಾಮ ವಿದ್ಯಾಕೇಂದ್ರವೊಂದು ಕುಟುಂಬ ಮಾದರಿಯಲ್ಲಿ ಕಾರ್ಯನಿರ್ವಹಿಸುತ್ತಾ ತನ್ನ ಕಾರ್ಯವನ್ನು ಇನ್ನಷ್ಟು ವಿಸ್ತಾರಗೊಳಿಸಿಕೊಳ್ಳಲು ಬೇಕಾದ ದೃಷ್ಟಿಕೋನ ಈ ಪ್ರವಾಸದಿಂದ ಲಭಿಸಿತೆನ್ನುವುದು ಹಲವರ ಅನಿಸಿಕೆ. ■



ಚಿಂತನರಶ್ಮಿ

# ಮಾತು ಸಂಸ್ಕೃತಿಯ ಪ್ರತಿಧ್ವನಿ

ಆನಂದಪುರ ಎಂಬ ಒಂದು ಊರು. ಆ ಊರಿನ ಹೊರಭಾಗದಲ್ಲಿ ಒಂದು ದೊಡ್ಡ ಆಶ್ರಮ. ಅಲ್ಲಿ ಹತ್ತಾರು ಜನ ಸನ್ಯಾಸಿಗಳು ವಾಸವಾಗಿದ್ದರು. ಅನೇಕ ಜನ ಬ್ರಹ್ಮಚಾರಿಗಳು, ಭಕ್ತರು ಬಂದು ಅದು ಸದಾ ಚಟುವಟಿಕೆಯಲ್ಲಿರುತ್ತಿತ್ತು. ಆ ಆಶ್ರಮಕ್ಕೆ ಸ್ವಾಮಿ ಭೈರವಾನಂದರು ಮುಖ್ಯಸ್ಥರು. ಆನಂದಪುರಕ್ಕೊಬ್ಬ ರಾಜನಿದ್ದ. ರಾಜನ ಮಂತ್ರಿಗಳು, ದೂತರು ಆಗಾಗ ಬಂದು ರಾಜ್ಯದಲ್ಲಿ ಏನೇನು ನಡೆಯುತ್ತಿದೆ ಎಂಬುದನ್ನು ರಾಜನಿಗೆ ತಿಳಿಸುತ್ತಿದ್ದರು.

ಒಂದು ಬಾರಿ ಮಂತ್ರಿಗಳು ಆಶ್ರಮದ ಬಗ್ಗೆ ಕೆಲವು ದೂರುಗಳನ್ನು ತಂದು ರಾಜನ ಮುಂದೆ ಹರಡಿದರು. "ಸ್ವಾಮಿ, ಈ ಆಶ್ರಮದಿಂದ ನಮ್ಮ ದೇಶಕ್ಕೇನೂ ಪ್ರಯೋಜನವಿಲ್ಲ. ಸನ್ಯಾಸಿಗಳೆಲ್ಲ ಸೋಮಾರಿಗಳು. ಯಾವ ಕೆಲಸವನ್ನೂ ಮಾಡುವುದಿಲ್ಲ. ಸುಮ್ಮನೇ ಕುಳಿತು ಕಾಲಹರಣ ಮಾಡುತ್ತಾರೆ". ಮತ್ತೊಬ್ಬ ಹೇಳಿದ, "ಸ್ವಾಮೀ , ಅವರ ಊಟ, ತಿಂಡಿಯ ವ್ಯವಸ್ಥೆಯನ್ನು ಏನು ಹೇಳೋಣ? ತಾವು ಕೂಡ ಅಂತಹ ಭೋಜನ ಮಾಡಿರಲಿಕ್ಕಿಲ್ಲ. ಏನಾದರೂ ನೆಪ ಮಾಡಿ ದಿನ ನಿತ್ಯ ಸಿಹಿ ತಿಂಡಿ ಮಾಡಿಸಿಕೊಂಡು ತಿನ್ನುತ್ತಾರೆ". ಮಗದೊಬ್ಬ ಸೇರಿಸಿದ ತನ್ನ ಮಾತುಗಳನ್ನು, "ಅಷ್ಟೇ ಅಲ್ಲ ಮಹಾಸ್ವಾಮೀ, ಬೆಳಿಗ್ಗೆ ತರತರದ ತಿಂಡಿಗಳಾಗುತ್ತವೆ, ಮಧ್ಯಾಹ್ನ ಊಟವಾದ ಮೇಲೆ, ರಾತ್ರಿಯ ಊಟವಾದ ಮೇಲೆ ಹಣ್ಣುಗಳು ಬೇಕೇ ಬೇಕು. ಇದೆಂಥ ಸನ್ಯಾಸ ಸ್ವಾಮೀ? ಎಲ್ಲವನ್ನೂ ಬಿಟ್ಟವರಿಗೆ ಈ ಸಂಭ್ರಮಗಳೆಲ್ಲ ಏಕೆ ಬೇಕು? ಸುಮ್ಮನೇ ತೋರಿಕೆಗೆ ಕಾವಿ ಬಟ್ಟೆ ಹಾಕುತ್ತಾರೆ. ಆದರೆ ಅವರಿಗೆ ರಾಜಭೋಗಗಳೆಲ್ಲ ಬೇಕು". ರಾಜನಿಗೆ ಹಿತ್ತಾಳೇ ಕಿವಿ. ಹೌದಲ್ಲ ಇವರ ಮಾತು! ಸನ್ಯಾಸಿಗಳಿಗೆಲ್ಲ ಇಷ್ಟೊಂದು ವ್ಯವಸ್ಥೆ ಯಾಕೆ ಬೇಕು?

ಮರುದಿನ ರಾಜ ಆಶ್ರಮದ ಮುಖ್ಯಸ್ಥರನ್ನು ಅರಮನೆಗೆ ಕರೆಸಿದ. ತನಗೆ ಬಂದಿದ್ದ ಆತಂಕವನ್ನು ಅವರ ಜೊತೆಗೆ ಹಂಚಿಕೊಂಡ. " ತಾವೆಲ್ಲ ಸನ್ಯಾಸಿಗಳು. ಈ ರೀತಿಯ ಭೋಗ ಜೀವನ ಸರಿಯೇ?" ಎಂದು ಪ್ರಶ್ನಿಸಿದ. ಸನ್ಯಾಸಿಗಳು ನಕ್ಕರು. "ಮಹಾರಾಜ, ನನ್ನದೊಂದು ವಿನಂತಿ ಇದೆ. ನಾನು ತಮ್ಮ ಅರಮನೆಗೆ ರಾತ್ರಿ ಎರಡು ಗಂಟೆಗೆ ಬರುತ್ತೇನೆ. ತಾವು ನನ್ನ ಜೊತೆಗೆ ಬರುವುದಾದರೆ ಒಂದು ವಿಶೇಷತೆಯನ್ನು ತೋರಿಸುತ್ತೇನೆ" ಎಂದರು. ಕೊಟ್ಟ ಮಾತಿನಂತೆ ರಾತ್ರಿ ಎರಡು ಗಂಟೆಗೆ ಸನ್ಯಾಸಿಗಳು ಅರಮನೆಗೆ ತಲುಪಿದರು. ರಾಜನನ್ನು ಕರೆದುಕೊಂಡು ಅವರ ಮಂತ್ರಿಗಳ ಮನೆಗೆ ನಡೆದರು. ಮಲಗಿದ್ದ ಮಂತ್ರಿಗಳ ಮುಖದ ಮೇಲೆ ಒಂದು ತಂಬಿಗೆ ತಣ್ಣೀರನ್ನು ಸುರಿದರು. ಗಾಬರಿಯಿಂದ ಎದ್ದ ಮಂತ್ರಿಗಳ ಬಾಯಿಯಿಂದ ಬೈಗುಳಗಳ ಸರಮಾಲೆಯೇ ಹೊರಟಿತು. ಅಲ್ಲಿಂದ ಹೊರಟು ರಾಜ ಮತ್ತು ಸನ್ಯಾಸಿ ಇಬ್ಬರೂ ಸೇನಾಪತಿಯ ಮನೆಗೆ ಬಂದರು. ಅಲ್ಲಿಯೂ ಇದೇ ಪ್ರಯೋಗ ನಡೆಯಿತು. ಅರೆ ನಿದ್ರೆಯಿಂದೆದ್ದ ಸೇನಾಪತಿಯ ಬಾಯಿಂದ ಇನ್ನೂ ಕೆಟ್ಟ ಪದಗಳು ಬಂದವು. ಆಮೇಲೆ ಈ ಪರೀಕ್ಷೆಯನ್ನು ಅರಮನೆಯ ವಿವಿಧ ಅಧಿಕಾರಿಗಳ ಮೇಲೆ ನಡೆಸಿದಾಗ ರಾಜ ಗಾಬರಿಯಾಗುವಷ್ಟರ ಮಟ್ಟಿಗೆ ಕೆಟ್ಟ ಮಾತುಗಳು ಅವರ ಬಾಯಿಂದ ಬಂದವು. ಸನ್ಯಾಸಿ ರಾಜನನ್ನು ಕರೆದುಕೊಂಡು ತಮ್ಮ ಆಶ್ರಮಕ್ಕೆ ಬಂದರು. ಗಾಢ ನಿದ್ರೆಯಲ್ಲಿದ್ದ ಸನ್ಯಾಸಿಗಳು, ಬ್ರಹ್ಮಚಾರಿಗಳ ಮುಖದ ಮೇಲೆ ತಣ್ಣೀರನ್ನು ಸುರಿದಾಗ ಅವರ ಬಾಯಿಂದ ಬಂದದ್ದೇನು ಗೊತ್ತೇ? ಹರಿ ಓಂ... ಶಿವ ಶಿವ... ರಾಮ, ರಾಮ... ಇಂತಹ ಉದ್ಗಾರಗಳೇ ಬಂದವು. ಆಗ ಸನ್ಯಾಸಿಗಳು ಹೇಳಿದರು "ನೋಡಿದಿರಾ, ಯಾವುದು ಸಂಸ್ಕಾರವೋ ಅದೇ ತಕ್ಷಣ ಬಾಯಲ್ಲಿ ಬರುತ್ತದೆ. ನನ್ನ ಶಿಷ್ಯರ ಬಾಯಲ್ಲಿ ಕೆಟ್ಟ ಮಾತು ಬರದೇ ಇರುವುದಕ್ಕೆ ಕಾರಣ ಅವರು ಆಶ್ರಮದಲ್ಲಿ ತಮ್ಮ ಜೀವನವನ್ನು ಪರಿಶುದ್ಧವಾಗಿ ಇಟ್ಟುಕೊಂಡು ಬದುಕಿದ್ದದ್ದು. ಇದು ಸಾಧ್ಯವಾದ್ದದ್ದು ಅವರು ಮಾಡಿದ ಊಟದಿಂದಲ್ಲ. ಅವರಿಗೆ ಊಟ ಬದುಕುವುದಕ್ಕೆ ಅವಶ್ಯ. ಆದರೆ ಅವರು ಬದುಕಿದ್ದದ್ದು ತಿನ್ನುವುದಕ್ಕಲ್ಲ, ಮನಸ್ಸು ದೇಹಗಳನ್ನು ಶುದ್ಧಿಗೊಳಿಸಲಿಕ್ಕೆ.

ನಿಮ್ಮ ಮಾತು, ನಿಮ್ಮ ಸಂಸ್ಕಾರವನ್ನು ತಿಳಿಸುತ್ತದೆ. ಸಂಸ್ಕಾರಕ್ಕೆ ಪರಿಶ್ರಮ ಬೇಕು. ಅದಕ್ಕೊಂದು ತ್ಯಾಗ ಜೀವನ ಅಗತ್ಯ. ■





ವಿವೇಕಾನಂದ ಶಿಲಾಸ್ಮಾರಕದಲ್ಲಿ





# ಪ್ರೌಢಶಾಲಾ ವಿಭಾಗ

ಶ್ರೀರಾಮ ಪ್ರೌಢಶಾಲಾ ವಿಭಾಗವು ಈ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇ 88 ಫಲಿತಾಂಶವನ್ನು ಪಡೆದಿದೆ. 333 ವಿದ್ಯಾರ್ಥಿಗಳು ಹಾಜರಾಗಿದ್ದು 292 ವಿದ್ಯಾರ್ಥಿಗಳು ತೇರ್ಗಡೆ-ಯಾಗಿದ್ದಾರೆ. 15 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿ. 97 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. 333 ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಪರೀಕ್ಷೆ ಬರೆದಿರುವುದು ರಾಜ್ಯದಲ್ಲೇ ದಾಖಲೆಯ ಸಂಖ್ಯೆಯಾಗಿದೆ.

## ಅಭಿನಂದನೆಗಳು


ಹರ್ಷವರ್ಧನ 591 (94.56%)


ವಚನ್ ಗೋಳ್ವಲ್ಕರ್ 591 (94.56)


ಕರೀಷ್ಮಾ ರೈ ಬಿ. 576 (92.16%)


ಪ್ರತೀಕ್ಷಾ ಪ್ರಭು 571 (91.36%)


ನಾಗರಾಜ 571 (91.36%)


ನಿಶಾ ರೈ ಕೆ 567 (90.7%)


ಮಯೂರ ಪ್ರಭು ಬಿ. 558 (89.28)


ಕಾವ್ಯ 556 (88.96%),


ಭಾಗ್ಯಶ್ರೀ-547 (87.52%)



ಸುಚೇತ್ ಕುಮಾರ್ ಜಿ. 547 (87.52%)


ಹೃಷಿಕೇಶ್ ಭಂಡಾರ್ಕಾರ್ 546 (87.36%),


ರವಿಚಂದ್ರ ಜಿ. 541 (86.56%),


ಕಾವ್ಯ ಡಿ. 539(86.24%),


ರಚನ್ ಗೋಳ್ವಲ್ಕರ್ 537 (85.92%)


ರಾಜೇಶ್ ಕುಮಾರ್ 535 (85.6%)

# ಪದವಿಪೂರ್ವ ವಿಭಾಗ

**ಪ್ರವಾಸ :** ವಿಜ್ಞಾನ ವಿಭಾಗದ ವಿದ್ಯಾರ್ಥಿಗಳ ಒಂದು ದಿನದ ಹೊರಸಂಚಾರ ಕಾರ್ಯಕ್ರಮವು 15-05-2012ರಂದು ನಡೆಯಿತು. ಕಲ್ಲಡ್ಕದಿಂದ ಹೊರಟು ಹೊಸನಾಡು ಕೊಡ್ಯಡ್ಕದ ಅನ್ನಪೂರ್ಣೇಶ್ವರೀ ದೇವಾಲಯಕ್ಕೆ ತೆರಳಿ ಅಲ್ಲಿನ ಸುಂದರ ಪರಿಸರದಲ್ಲಿ ಭಜನಾ ಕಾರ್ಯಕ್ರಮದಲ್ಲಿ ಭಾಗವಹಿಸಿ, ಅಲ್ಲಿಂದ ಮಣಿಪಾಲದಲ್ಲಿ ತಾರಾಲಯ, ವೇಣುಗೋಪಾಲ ಮಂದಿರ ಹಾಗೂ ಉದಯವಾಣಿ ದಿನಪತ್ರಿಕಾ ಮುದ್ರಣಾಲಯವನ್ನು ಸಂದರ್ಶಿಸಲಾಯಿತು. ಮಧ್ಯಾಹ್ನ ಉಡುಪಿಯ ಶ್ರೀಕೃಷ್ಣ ದರ್ಶನದ ಬಳಿಕ ಬಪ್ಪನಾಡು ಶ್ರೀದುರ್ಗಾಪರಮೇಶ್ವರಿ ದೇವಸ್ಥಾನ ನಂತರ ಸಾಯಂಕಾಲ ಸುರತ್ಕಲ್ ಕಡಲ ಕಿನಾರೆಗೆ ತೆರಳಿ ವಿದ್ಯಾರ್ಥಿಗಳು ಸಂಭ್ರಮಿಸಿದರು. ಒಟ್ಟು 54 ವಿದ್ಯಾರ್ಥಿಗಳು ಹಾಗೂ 3 ಜನ ಉಪನ್ಯಾಸಕರು ಮತ್ತು ಇಬ್ಬರು ಬೋಧ-ಕೇತರ ಸಿಬ್ಬಂದಿಯವರು ಜೊತೆಗಿದ್ದರು. ಕಳೆದ 2 ತಿಂಗಳಿನಿಂದ ನಡೆಯುತ್ತಿದ್ದ ವಿಜ್ಞಾನ ವಿಭಾಗದ ವಿಶೇಷ ತರಗತಿ ಪ್ರವಾಸದೊಂದಿಗೆ ಮುಕ್ತಾಯಗೊಂಡಿತು.



## ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ :

ಶ್ರೀರಾಮ ಪದವಿ ಪೂರ್ವ ಕಾಲೇಜಿನ ಪ್ರಸಕ್ತ ಸಾಲಿನಲ್ಲಿ ದ್ವಿತೀಯ ಪಿ.ಯು.ಸಿ ಪರೀಕ್ಷೆಗೆ ಹಾಜರಾದ 234 ವಿದ್ಯಾರ್ಥಿಗಳಲ್ಲಿ 228 ವಿದ್ಯಾರ್ಥಿಗಳು ತೇರ್ಗಡೆಯಾಗಿ ಒಟ್ಟು ಶೇ 97 ಫಲಿತಾಂಶ ದಾಖಲಾಗಿದೆ.

ಕಲಾ ವಿಭಾಗದಲ್ಲಿ 68 ರಲ್ಲಿ 67, ವಾಣಿಜ್ಯ ವಿಭಾಗದಲ್ಲಿ 119 ರಲ್ಲಿ 118, ವಿಜ್ಞಾನ ವಿಭಾಗದಲ್ಲಿ 47 ರಲ್ಲಿ 43 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. ವಿಶಿಷ್ಟ ಶ್ರೇಣಿಯಲ್ಲಿ 9, ಪ್ರಥಮ ಶ್ರೇಣಿಯಲ್ಲಿ 168 ವಿದ್ಯಾರ್ಥಿಗಳು ತೇರ್ಗಡೆಯಾಗಿ ಸಾಧನೆಗೈದಿದ್ದಾರೆ.

## 2011–12ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಹೊಂದಿದವರು



ಶರ್ಮಿಳಾ ಪ್ರಭು
ಅಂಕ : 530 ವಿಜ್ಞಾನ ವಿಭಾಗ



ಭರತ್ ರಾಜ್
ಅಂಕ : 513 ವಿಜ್ಞಾನ ವಿಭಾಗ



ವಿದ್ಯಾಶ್ರೀ ಬಿ.
ಅಂಕ : 522 ಕಲಾ ವಿಭಾಗ



ಪ್ರಜ್ಞಾ
ಅಂಕ : 544 ವಾಣಿಜ್ಯ ವಿಭಾಗ



ಸುಧೀರ್ ರಾವ್
ಅಂಕ : 536 ವಾಣಿಜ್ಯ ವಿಭಾಗ



ರಮ್ಯಾ
ಅಂಕ : 527 ವಾಣಿಜ್ಯ ವಿಭಾಗ



ಲಿತೇಶ್
ಅಂಕ : 522 ವಾಣಿಜ್ಯ ವಿಭಾಗ



ನವೀನ
ಅಂಕ : 514 ವಾಣಿಜ್ಯ ವಿಭಾಗ



ಕಾವ್ಯ
ಅಂಕ : 513 ವಾಣಿಜ್ಯ ವಿಭಾಗ

**ಅಭಿನಂದನೆಗಳು**





ವಿವೇಕಾನಂದ ಶಿಲಾಸ್ಮಾರಕದಲ್ಲಿ





**ವಸ್ತುಪ್ರದರ್ಶನಕ್ಕೆ ಭೇಟಿ.**

ಅಖಿಲ ಭಾರತೀಯ ವಿಜ್ಞಾನ ಪರಿಷತ್ತಿನ ರಾಜ್ಯಮಟ್ಟದ ವಸ್ತುಪ್ರದರ್ಶನಕ್ಕೆ ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದ ವಿದ್ಯಾರ್ಥಿ– ವಿದ್ಯಾರ್ಥಿನಿಯರು ದಿನಾಂಕ ಮೇ 14 ರಂದು ಭೇಟಿ ನೀಡಿದರು. ದ್ವಿತೀಯ ಪಿ.ಯು.ಸಿಗೆ ತೇರ್ಗಡೆಯಾದ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳಿಗೆ ನಡೆಯುತ್ತಿರುವ ವಿಶೇಷ ತರಬೇತಿಯ ಒಂದು ಅಂಗವಾಗಿ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಒಟ್ಟು 52 ಮಂದಿ ಸಹ್ಯಾದ್ರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ಸೃಷ್ಟಿ– 2012ರಲ್ಲಿ ಭಾಗವಹಿಸಿ ಮೆಕಾನಿಕಲ್, ಇಲೆಕ್ಟ್ರಾನಿಕ್ಸ್, ಕಂಪ್ಯೂಟರ್ ವಿಭಾಗದ ಹಲವು ಮಾದರಿಗಳ ಬಗೆಗೆ ಮಾಹಿತಿ ಪಡೆದರು. ಕಾಲೇಜಿನ ಪ್ರಾಚಾರ್ಯರು ಹಾಗೂ ಉಪನ್ಯಾಸಕರು ಜೊತೆಗಿದ್ದರು.



## ಪದವಿ ವಿಭಾಗ

**ಪದವಿ ಫಲಿತಾಂಶ** : 2011–12ನೇ ಸಾಲಿನ ತೃತೀಯ ಬಿ.ಕಾಂ ಹಾಗೂ ಬಿ.ಬಿ.ಎಂ ತರಗತಿಗಳ ಆರನೇ ಸೆಮಿಸ್ಟರ್ ಫಲಿತಾಂಶ ಪ್ರಕಟವಾಗಿದ್ದು, ಬಿ.ಕಾಂ 86.11% ಹಾಗೂ ಬಿ.ಬಿ.ಎಂ 69.23% ಆಗಿರುತ್ತದೆ. ತೃತೀಯ ಬಿ.ಕಾಂ ತರಗತಿಯಲ್ಲಿ ರುಕೇಶ್ 92% ಹಾಗೂ ತೃತೀಯ ಬಿ.ಬಿ.ಎಂ.ನ ಭಾರತಿ 85% ಅಂಕಗಳನ್ನು ಪಡೆದು ತರಗತಿಗೆ ಪ್ರಥಮ ಸ್ಥಾನಿಯಾಗಿರುತ್ತಾರೆ.

ತೃತೀಯ ಬಿ.ಬಿ.ಎಂ ತರಗತಿಯಲ್ಲಿ 13 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 9 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ.

ತೃತೀಯ ಬಿ.ಕಾಂ ತರಗತಿಯಲ್ಲಿ 36 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, 31 ವಿದ್ಯಾರ್ಥಿಗಳ ಉತ್ತೀರ್ಣರಾಗಿರುತ್ತಾರೆ.



ರುಕೇಶ್ 827 (92%)



ವಿಜಯಲಕ್ಷ್ಮೀ 801 (89%),



ಅಮಿತಾ 795 (88%)



ದಿನೇಶ್ 779 (86%)



ಗೀತಾ 776 (86%)



ರಾಜೇಶ್ 769 (85%)



ಸಂದೀಪ್ 767 (85%)



ಹರುಷ 760 (84%),



ಪ್ರಮೀಳಾ 749(83%)



ಭಾರತಿ 745 (83%)
ಬಿ.ಬಿ.ಎಮ್.



ನಿವೇದಿತಾ
739(82%)



ಪೂರ್ಣಿಮಾ
720(80%)



ಪಾವನಗಂಗಾ
716 (80%)



## ನೀವೂ ಯೋಚಿಸಿ....

ಈ ಚಿತ್ರಕ್ಕೆ ಶೀರ್ಷಿಕೆಯನ್ನು ಕಳುಹಿಸಿಕೊಡಿ.

ನಾನೇರುವ ಎತ್ತರಕ್ಕೆ ನೀನೇರಬಲ್ಲೆಯಾ....?





## ನೀವೂ ಚಿಂತಿಸಿ....

ಇಲ್ಲಿನ ಚಿತ್ರಗಳೊಂದಿಗೆ ವಾಕ್ಯಗಳನ್ನು ಸೇರಿಸಿ ಓದಿ, ನೀವೂ ಈ ರೀತಿಯ ಚಿತ್ರವಾಕ್ಯದ ಮೂಲಕ ಯಾವುದೇ ಕಥೆಯನ್ನಾಗಲೀ, ವಿಷಯವನ್ನಾಗಲೀ ನಿರೂಪಿಸಿ "ಸರಯೂ"ಗೆ ಕಳುಹಿಸಿಕೊಡಿ. ಪ್ರಕಟಿಸಲಾಗುವುದು.

 ಗಳು ಜೀವರಾಶಿಗೆ ಶುದ್ಧಗಾಳಿಯನ್ನು ನೀಡುತ್ತದೆ. $O_2$ವಿಲ್ಲದೆ ಮಾನವನಿಗೆ ಜೀವಿಸಲು ಸಾಧ್ಯವಿಲ್ಲ. ನಮ್ಮ ವಾತಾವರಣವನ್ನು ಶುದ್ಧವಾಗಿಡಲು  ಗಳ ಅಗತ್ಯವಿದೆ. ಅವುಗಳು ಯ ಮೇಲೆ ಹಸುರಿನ ತಂಪು ಹೊದಿಸುತ್ತದೆ. ದಿಂದ ಮಣ್ಣಿನ ಸಾರ ಹೆಚ್ಚುತ್ತದೆ. ಗಳು ನಮಗೆ ,  ಕೊಡುತ್ತದೆ.  ಗಳು ಬಿಸಿಲಿನಲ್ಲಿ ಬೆಂದರೂ  ರಿಗೆ ತಂಪನ್ನು ನೀಡುತ್ತದೆ. ನೀರಾವಿಯನ್ನು ಹೊತ್ತ  ಗಳನ್ನು ತಡೆದು ನೆಲಕ್ಕೆ  ಯನ್ನು ಸುರಿಸಲು ಒತ್ತಾಸೆ ನೀಡುತ್ತದೆ.  ಗಳು ಯಾವಾಗಲೂ ಪರರಹಿತವನ್ನು ಬಯಸುತ್ತದೆ. ಮತ್ತು  ರಿಗೆ ಅನೇಕ ಪ್ರಯೋಜನಗಳನ್ನು ನೀಡುತ್ತದೆ. ವೇ ನಮ್ಮ ನಾಡಿನ ಸಂಪತ್ತು.







ವಿವೇಕಾನಂದ ಶಿಲಾಸ್ಮಾರಕದಲ್ಲಿ

# ಧ್ಯೇಯವಾದವೊಂದೇ ಬಲ

ನಾವು ಎಲ್ಲರನ್ನೂ ಜೋಡಿಸಿಕೊಂಡು ಮುಂದಕ್ಕೆ ಸಾಗಬೇಕು ಎಂದು ಹೇಳುತ್ತಾರೆ. ಸರಿಯಾದ ಮಾತು, ಅಂದ ಮಾತ್ರಕ್ಕೆ ನಾವು ಸ್ವಾರ್ಥಿಗಳ ಬಗ್ಗೆ ಉದಾಸೀನರಾಗಿರಬೇಕೆಂದಲ್ಲ. ನಾವು ಅಷ್ಟು ಬಿಗಿಯಾಗಿರುವುದು ಹೇಗೆ ಸಾಧ್ಯ? ಎಂದು ಅವರು ಕೇಳುತ್ತಾರೆ. ಒಬ್ಬ ಒಳ್ಳೇ ವಾಗ್ಮಿ,ಉತ್ತಮ ಬರಹಗಾರ ಕುಶಲ ಸಂಘಟಕ ಹಾಗೂ ಚತುರ ಸಂಧಾನ ಕರ್ತ ಇವರುಗಳನ್ನು ಕಳೆದುಕೊಳ್ಳಬಾರದು. ಅವರಲ್ಲಿ ಸ್ವಲ್ಪ ಸ್ವಲ್ಪ ದೋಷಗಳಿದ್ದರೂ ಅವುಗಳನ್ನು ಅಷ್ಟೊಂದಾಗಿ ಗಣನೆಗೆ ತೆಗೆದುಕೊಳ್ಳಬಾರದು ಎಂದು ವಾದಿಸುವವರಿದ್ದಾರೆ. ತುಂಬ ಹಾಲು ಕೊಡುವ ಹಸುವಿನಿಂದ ಒಂದೆರಡು ಒದೆಗಳನ್ನು ತಿನ್ನಬೇಕಾಗಿ ಬಂದರೂ ನಷ್ಟವೇನಿಲ್ಲ– ಎನ್ನುತ್ತಾರೆ ಅವರು. ಆದರೆ ಅಂತಹ ಅವಕಾಶವಾದೀ ಸಲಹೆಗಳನ್ನು ಒಂದು ಧ್ಯೇಯವಾದೀ ಸಂಘಟನೆ ಒಪ್ಪಲು ಸಾಧ್ಯವಿಲ್ಲ.

ಇದಕ್ಕೆ ಮಹಾಭಾರತದಲ್ಲಿ ಎರಡು ಒಳ್ಳೆಯ ಉದಾಹರಣೆಗಳಿವೆ. ಒಂದು ಧೃತರಾಷ್ಟ್ರನದ್ದು. ಆತ ಕಣ್ಣಿಂದ ಕುರುಡನಾಗಿದ್ದಂತೆ ವಿವೇಚನಾ ಶಕ್ತಿಯಲ್ಲೂ ಅಂಧನಾಗಿದ್ದ. ಆತನಿಗೆ ಧರ್ಮ. ಅಧರ್ಮಗಳು ಗೊತ್ತಿರಲಿಲ್ಲವೆಂದಲ್ಲ. ಆತನ ಮಕ್ಕಳು ಅಧರ್ಮಿಗಳಾಗಿದ್ದರು. ಇದು ಗೊತ್ತಿದ್ದೂ ಮಕ್ಕಳ ಮೇಲಿನ ಕುರುಡು ಪ್ರೀತಿಯಿಂದ ಆತ ಅವರು ಮಾಡಿದ ಅಧರ್ಮ ಕಾರ್ಯಗಳಿಗೆಲ್ಲ ಮೂಕ ಸಮ್ಮತಿಯನ್ನಿತ್ತ. ಪರಿಣಾಮ– ಆತನ ವಂಶವೇ ನಾಶವಾಗಿ ಹೋಯಿತು. "ಭೀಷ್ಮ ಮಲಗಿದ,ದ್ರೋಣ ಹತನಾದ" ಎಂದು ಆತನಿಗೆ ತಿಳಿಸಿದಾಗಲೂ ಆತನೆನ್ನುತ್ತಾನೆ "ಆಶಾ ಬಲವತೀ ರಾಜನ್" "ಇನ್ನೂ ಆಸೆ ಇದೆ ಕರ್ಣನು ಗೆದ್ದು ಬರಬಹುದು" ಎಂದು ಹುಚ್ಚು ಆಸೆ ಪಡುತ್ತಾನೆ. ಕಾರಣವಿಷ್ಟೇ– ಧೃತರಾಷ್ಟ್ರನ ಮುಂದೆ ಯಾವುದೇ ಒಂದು ಉನ್ನತ ಆದರ್ಶವಿರಲಿಲ್ಲ. ಬೇರೆಲ್ಲ ಇತ್ತು.

ಎರಡನೇ ಉದಾಹರಣೆ ಶ್ರೀಕೃಷ್ಣನದ್ದು. ತನ್ನ ಸ್ವಂತ ಕುಲದವರಾದ ಯಾದವರು ತಮ್ಮ ಸುಖ ಸಂಪತ್ತಿನಿಂದ ಭ್ರಷ್ಟರಾದಾಗ ಕೃಷ್ಣ ಯೋಚಿಸಿದ– ತಾನು ಕಾಲವಾಗುವ ಮುಂಚೆ ಈ ಭಂಡರನ್ನು ನಾಶಮಾಡದಿದ್ದರೆ ಮುಂದೆ ಇವರು ಲೋಕ ಕಂಟಕರಾಗಬಹುದು ಎಂದು. ಅದರಂತೆ ತನ್ನ ರಕ್ತಬಾಂಧವರೇ ಆಗಿದ್ದರೂ ಯಾವುದೇ ಮಮಕಾರಕ್ಕೆ ಒಳಗಾಗದೇ ತನ್ನ ಕೈಯಾರೆ ಯಾದವ ವಂಶವನ್ನು ನಾಶಗೊಳಿಸಿದ. ತಾನು ತನ್ನದು ಎಂಬ ಸ್ವಂತದ, ಮಮಕಾರದಿಂದ ಮೇಲೆದ್ದು ಬಂದ ಉನ್ನತ ಆದರ್ಶಕ್ಕಾಗಿ ಕಾರ್ಯ ಮಾಡುವ ಒಳ್ಳೆಯ ಉದಾಹರಣೆ ಇದು. ಈ ಎರಡು ಉದಾಹರಣೆಗಳೊಳಗೆ ಧ್ಯೇಯವಾದಿಯಾದವನು ಯಾವ ಆದರ್ಶಗಳನ್ನು ಆರಿಸಿಕೊಳ್ಳಬೇಕು?



ಭೀಷ್ಮ ಶರಶಯ್ಯೆಯ ಮೇಲೆ ಒರಗಿರಬೇಕಾದರೆ ಆತನನ್ನು ಕೇಳಲಾಯಿತು. "ನೀನು ನೀತಿ, ನ್ಯಾಯ, ಧರ್ಮಸೂಕ್ಷ್ಮ ಬಲ್ಲವನು, ಮಹಾಮೇಧಾವಿಆದರೆ ಕೃಷ್ಣ ಅಂತಹ ಮೇಧಾವಿ ಏನಲ್ಲ, ನೀನು ಅಖಂಡ ಬ್ರಹ್ಮಚಾರಿ, ಅವನಿಗಾದರೋ 16008 ಹೆಂಡಂದಿರು. ವ್ಯಕ್ತಿಗತವಾಗಿ ನೀನು ಇಷ್ಟು ದೊಡ್ಡ ವ್ಯಕ್ತಿಯಾದರೂ ನೀನು ಕೃಷ್ಣನನ್ನು ಮಹಾಪುರುಷ ಎಂದೇಕೆ ತಿಳಿಯುತ್ತೀ?"

ಇದಕ್ಕೆ ಭೀಷ್ಮ ನೀಡಿದ ಉತ್ತರ "ಅನೇಕ ಸಂಗತಿಗಳಲ್ಲಿ ಕೃಷ್ಣನಿಗಿಂತ ನನ್ನಲ್ಲಿ ಹೆಚ್ಚಿನ ಶಕ್ತಿ ಸಾಮರ್ಥ್ಯಗಳಿದ್ದಾಗಲೂ ಒಂದು ವಿಷಯದಲ್ಲಿ ಮಾತ್ರ ಕೃಷ್ಣನಲ್ಲಿ ನನಗಿಂತ ಒಂದು ಶ್ರೇಷ್ಠ ಗುಣ ಇದೆ. ಆ ಒಂದು ಗುಣವೇ ನನ್ನಲ್ಲಿರುವ ಎಲ್ಲಾ ಸದ್ಗುಣಗಳನ್ನೂ ಮಸುಕುಗೊಳಿಸಲು ಸಾಕು. ಅದೇನೆಂದರೆ ಕೃಷ್ಣ ಎಲ್ಲಾ ವ್ಯಾಮೋಹಗಳನ್ನು ಜಯಿಸಿದ್ದಾನೆ. ಆದರೆ ನನ್ನಿಂದ ವ್ಯಾಮೋಹಗಳನ್ನು ಜಯಿಸಲು ಇನ್ನೂ ಆಗಿಲ್ಲ. ಆದ್ದರಿಂದಲೇ ಶ್ರೀಕೃಷ್ಣ ನನಗಿಂತ ಶ್ರೇಷ್ಠ ವ್ಯಕ್ತಿ".ಆದ್ದರಿಂದ ಧ್ಯೇಯವಾದವೇ ನಮ್ಮ ಬಲ. ಮಿಕ್ಕೆಲ್ಲ ಸಂಗತಿಗಳನ್ನೂ ಧ್ಯೇಯವಾದ ಮೀರಿ ನಿಲ್ಲಬೇಕು. ಗುರುಗೋವಿಂದ ಸಿಂಹ ನುಡಿದಂತೆ ಅದು ಪ್ರತಿಯೊಬ್ಬ ವ್ಯಕ್ತಿಯನ್ನೂ ಒಂದೂಕಾಲು ಲಕ್ಷ ಸೈನಿಕರೊಡನೆ ಹೋರಾಡುವಷ್ಟು ಶಕ್ತಿ ಸಾಮರ್ಥ್ಯ ಸಂಪನ್ನರನ್ನಾಗಿ ರೂಪಿಸುತ್ತದೆ. ಧ್ಯೇಯ ಶೂನ್ಯ ವ್ಯಕ್ತಿಗಳು ಎಷ್ಟೇ ದೊಡ್ಡವರಾದರೂ ರಾತ್ರಿ ಆಕಾಶದಲ್ಲಿ ಮಿನುಗಿ ಹಗಲು ಮಾಯವಾಗುವ ನಕ್ಷತ್ರಗಳಂತೆ.

**ದತ್ತೋಪಂತ ಠೇಂಗಡಿ**

**"ಅನೇಕ ಹೂವುಗಳು ಅರಳುತ್ತವೆ, ಅರಳಿ ಬಾಡಿ ಉದುರಿಹೋಗುತ್ತವೆ. ಅವುಗಳನ್ನು ಯಾರು ತಾನೆ ಲೆಕ್ಕಿಸುತ್ತಾರೆ? ಗಜೇಂದ್ರನು ತನ್ನ ಸೊಂಡಿಲಿನಿಂದ ಶ್ರೀ ಹರಿಯ ಪೂಜೆಗೆಂದು ಕಿತ್ತು ಅರ್ಪಿಸಿದ ಆ ಹೂವೇ ಧನ್ಯ, ಪಾವನ."**

**ಸ್ವಾತಂತ್ರ್ಯವೀರ ಸಾವರ್ಕರ್**

**ನಿಮ್ಮ ಅಭಿಪ್ರಾಯಗಳಿಗೆ ಸ್ವಾಗತ. ಸರಯೂ ಪತ್ರಿಕೆಯ ಪೋಷಕರಾಗಬಯಸುವವರು ರೂ. 1000/–ದ ಡಿ.ಡಿ./ಚೆಕ್‌ನ್ನು ಶ್ರೀರಾಮ ವಿದ್ಯಾಕೇಂದ್ರ ಟ್ರಸ್ಟ್ ಹೆಸರಿನಲ್ಲಿ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.**

**ಸಂಪಾದಕರು, ಸರಯೂ**
ಶ್ರೀರಾಮ ವಿದ್ಯಾಕೇಂದ್ರ, ಹನುಮಾನ್ ನಗರ,
ಕಲ್ಲಡ್ಕ, ದ.ಕ. – 574 222.

ಸವಿಧೇ

**ತೆರೆದ ಅಂಚೆ**

..........................................................................................

..........................................................................................

..........................................................................................